ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 179-184
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಆಂಧ್ರಪ್ರದೇಶದ ಅಮರನಾಯಕ ಮನೆತನಗಳು: ಒಂದು ವಿಶ್ಲೇಷಣೆ

**ಕಿರಣ್ ಜಿ.ಎನ್[1] ಮತ್ತು ಡಾ.ವೈ.ಹೆಚ್ ನಾಯಕ್‌ವಾಡಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

**Abstract:**
*ವಿಜಯನಗರ ಕಾಲದ ಅಮರನಾಯಕ ವ್ಯವಸ್ಥೆಯಲ್ಲಿ ನಾಯಕರು ರಾಜನಿಂದ ಭೂಪ್ರದೇಶ ಪಡೆದುಕೊಂಡು ರಾಜನಿಗೆ ಸೇನಾ ಸೇವೆಯನ್ನು ಮಾಡುವುದರ ಜೊತೆಗೆ ನಿಷ್ಠೆಯನ್ನು ತೋರಿಸುತ್ತಿದ್ದರು. ಈ ಪ್ರದೇಶಕ್ಕೆ ನಾಯಕನೇ ನಿಜವಾದ ಒಡೆಯನಾಗಿರುತ್ತಿದ್ದನು. ವಿಜಯನಗರ ಕಾಲದಲ್ಲಿ ರಾಜನು ನಾಯಕರಿಗೆ ಭೂಪ್ರದೇಶವನ್ನು ಉಂಬಳಿಯಾಗಿ ನೀಡುತ್ತಿದ್ದುದು ಸೈನ್ಯ ಸೇವೆಯೇ ಪ್ರಧಾನ ಅಂಶವಾಗಿತ್ತು. ಪ್ರಸ್ತುತ ಲೇಖನದಲ್ಲಿ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಆಂಧ್ರಪ್ರದೇಶದ ಅಮರನಾಯಕ ಮನೆತನಗಳನ್ನು ಕುರಿತು ವಿಶ್ಲೇಷಿಸಲಾಗಿದೆ. 16ನೇ ಶತಮಾನದಲ್ಲಿ ಕೃಷ್ಣದೇವರಾಯ ಮತ್ತು ಸದಾಶಿವರಾಯನ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಊಳಿಗಮಾನ್ಯ ಲಕ್ಷಣಗಳನ್ನು ಹೊಂದಿರುವ ನಾಯಕರ ಮನೆತನಗಳು ಉಗಮವಾದವು.*

**Keywords:** *ಕರ್ನಾಟಕ ಇತಿಹಾಸ, ವಿಜಯನಗರ ಸಾಮ್ರಾಜ್ಯ, ಆಂಧ್ರಪ್ರದೇಶ, ಅಮರನಾಯಕ ವ್ಯವಸ್ಥೆ, ಅಮರನಾಯಕ ಮನೆತನಗಳು.*

### ಪೀಠಿಕೆ

ವಿಜಯನಗರ ಆಡಳಿತದ ಬಗ್ಗೆ ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದು ವಿಜಯನಗರ ಕಾಲದಲ್ಲಿನ ಆಳ್ವಿಕೆಯನ್ನು ಬೇರೆ ಬೇರೆ ರೀತಿಯಲ್ಲಿ ತಮ್ಮ ತಮ್ಮ ಅಭಿಪ್ರಾಯವನ್ನು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ವಿವರಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.

### ಕೇಂದ್ರಿಕೃತ ಪ್ರಭುತ್ವ ಸಿದ್ಧಾಂತ

ಈ ಸಿದ್ಧಾಂತವನ್ನು ಕೆ.ಎ. ನೀಲಕಂಠಶಾಸ್ತ್ರಿರವರು ಮಂಡಿಸಿದ್ದಾರೆ. ವಿಜಯನಗರ ಆಡಳಿತ ವ್ಯವಸ್ಥೆಯು ಕೇಂದ್ರಿಕೃತವಾದ ಆಡಳಿತವನ್ನು ಹೊಂದಿದೆ ಎಂಬುದಾಗಿ ಅಭಿಪ್ರಾಯಿಸಿದ್ದಾರೆ. ಅಂದರೆ ವಿಜಯನಗರ ಸಾಮ್ರಾಜ್ಯದ ಎಲ್ಲಾ ಆಡಳಿತವು ಕೇಂದ್ರದ ಅಧೀನಕ್ಕೆ ಒಳಪಟ್ಟಿರುತ್ತದೆ. ರಾಜನು ಕೇಂದ್ರದಿಂದ ಪ್ರಾಂತ್ಯಗಳವರೆಗಿನ ಎಲ್ಲಾ ಪ್ರಾಂತ್ಯಾಧಿಕಾರಿಗಳು ರಾಜನಿಗೆ ವಿಧೇಯರಾಗಿದ್ದುಕೊಂಡು ಅವನ ಆಜ್ಞೆಯನ್ನು ಪಾಲಿಸಬೇಕಿತ್ತು ಹಾಗೂ ಸಾಮ್ರಾಜ್ಯದಲ್ಲಿನ ಶಾಸನಗಳನ್ನು ಹೊರಡಿಸುವುದು ಮತ್ತು ನಾಣ್ಯಗಳನ್ನು ಅಚ್ಚು ಹಾಕಿಸುವ ಹಾಗೂ ಕಾರ್ಯಕಾರಿ ಮತ್ತು ನ್ಯಾಯಾಡಳಿತ ಅಧಿಕಾರಗಳು ಎಲ್ಲಾ ರಾಜನಿಗೆ ಸೇರಿರುತ್ತಿತ್ತು ಸಾಮ್ರಾಜ್ಯದ ಎಲ್ಲಾ ಅಧಿಕಾರಿಗಳಿಗೂ ಆಡಳಿತದಲ್ಲಿ ಸಲಹೆ ಸೂಚನೆಗಳನ್ನು ನೀಡಿ

**Please cite this article as:** ಕಿರಣ್. ಜಿ .ಎನ್ ಮತ್ತು ವೈ.ಹೆಚ್ ನಾಯಕ್‌ವಾಡಿ. (2024). ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಆಂಧ್ರಪ್ರದೇಶದ ಅಮರನಾಯಕ ಮನೆತನಗಳು: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 179–184

ಅವುಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುವಂತೆ ನಿರ್ದೇಶನ ನೀಡುತ್ತಿದ್ದನು. ರಾಜನಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡಲು ಮಂತ್ರಿಮಂಡಲವನ್ನು ಹೊಂದಿದ್ದನು. ಹಾಗಾಗಿ ವಿಜಯನಗರ ಆಡಳಿತವು ಕೇಂದ್ರಿಕೃತವಾಗಿತ್ತು ಹಾಗೂ ಇದು ಕೇಂದ್ರೀಕೃತ ಮಿಲಿಟರಿ ಪ್ರಧಾನ ರಾಜ್ಯವಾಗಿತ್ತು ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ.

**ಘಟಕ ರಾಜ್ಯ ಸಿದ್ಧಾಂತ**

ಈ ಸಿದ್ಧಾಂತವನ್ನು ಬರ್ಟನ್ ಸ್ಟೈನ್‌ರವರು ಪ್ರತಿಪಾಧಿಸಿದ್ದಾರೆ ಬರ್ಟನ್ ಸ್ಟೈನ್ ವಿಕೇಂದ್ರಿಕೃತ ರಾಜ್ಯಾಡಳಿತ ವ್ಯವಸ್ಥೆಯನ್ನು 'ಸೆಗ್‌ಮೆಂಟರಿ ಸ್ಟೇಟ್' ಎನ್ನುವ ಹೊಸ ಸಿದ್ಧಾಂತವನ್ನು ಮಂಡಿಸಿದ್ದಾರೆ. ವಿಜಯನಗರ ಆಡಳಿತವನ್ನು ಭಿನ್ನ ರೀತಿಯಲ್ಲಿ ವಿವರಿಸಿದ್ದಾರೆ. ಸ್ಟೈನ್‌ರವರು ಅರಸು ಕೇಂದ್ರಿತವಾದ ಬರವಣಿಗೆಯ ಬದಲಿಗೆ ರೈತ ಕೇಂದ್ರಿತ ಬರವಣಿಗೆಯನ್ನು ಆಯ್ಕೆ ಮಾಡಿಕೊಂಡರು. ಘಟಕಗಳಿಂದಾಗಿ ವಿವಿಧ ರೀತಿಯ ಹಲವಾರು ಆಡಳಿತ ಕೇಂದ್ರಗಳು ಅಸ್ಥಿತ್ವದಲ್ಲಿದ್ದವು. ಅವುಗಳನ್ನೇ ನಾಡುಗಳೆಂದು ಕರೆಯಲಾಗಿದೆ. ಅವುಗಳಲ್ಲಿ ರೈತರ ವಾಸದ ನೆಲೆಗಳಾಗಿ ಹಳ್ಳಿಗಳಿದ್ದವು ಪ್ರತಿ ನಾಡು ಸ್ವತಂತ್ರ ಘಟಕವಾಗಿದ್ದು ಪ್ರತಿಯೊಂದು ನಾಡು ತನ್ನದೇ ಆದ ಆಡಳಿತಗಾರರೊಂದಿಗೆ ಸ್ವತಂತ್ರವಾಗಿ ಆಡಳಿತವನ್ನು ಮಾಡುತ್ತಿದ್ದರು. ಇದು ಬರ್ಟನ್ ಸ್ಟೈನ್‌ರವರು ಗುರುತಿಸಿದ ವಿಜಯನಗರ ರಾಜ್ಯ ವ್ಯವಸ್ಥೆಯಾಗಿದೆ ಮುಂದುವರೆದು ರಾಜನು ಕೇಂದ್ರದಲ್ಲಿ ಸಂಪೂರ್ಣವಾದ ನೇರ ಅಧಿಕಾರವನ್ನು ಹೊಂದಿದ್ದನು ಆದರೆ ಪ್ರಾಂತ್ಯಗಳಲ್ಲಿ ಸಾಮಂತರು ರಾಜನಿಗೆ ವಿದೇಯರಾಗಿದ್ದುಕೊಂಡು ತಮ್ಮ ವ್ಯಾಪ್ತಿಯಲ್ಲಿ ಅಧಿಕಾರವನ್ನು ಚಲಾಯಿಸುತ್ತಿದ್ದರು ಇವರು ತಮ್ಮ ಅಧಿಕಾರವನ್ನು ನಾಡು, ಅಗ್ರಹಾರ, ದೇವಾಲಯ, ಮಠ, ಗ್ರಾಮಗಳಲ್ಲಿ ಚಲಾಯಿಸುತ್ತಿದ್ದು ಇವು ಸ್ಥಳೀಯ ಸರ್ಕಾರಗಳಾಗಿವೆ. ಪ್ರಾಂತ್ಯಗಳಲ್ಲಿ ಸಾಮಂತರಿದ್ದು ಅಲ್ಲಿನ ಅಧಿಕಾರಗಳಿಂದ ತೆರಿಗೆ ಸಂಗ್ರಹ, ನ್ಯಾಯ ತೀರ್ಮಾನ ಇತ್ಯಾದಿ ಕಾರ್ಯಗಳನ್ನು ಅವರೇ ಮಾಡಿಕೊಳ್ಳುತ್ತಿದ್ದರು.

ವಿಜಯನಗರ ಆಡಳಿತವನ್ನು ಬರ್ಟನ್ ಸ್ಟೈನ್‌ರವರು ಘಟಕ ರಾಜ್ಯವೆಂದು ಕರೆಯಲು ಮುಖ್ಯ ಕಾರಣ ಅಲ್ಲಿನ ಆಳ್ವಿಕೆಯು ತುಂಡು ತುಂಡಾಗಿ ವಿಭಜಿಸಲ್ಪಟ್ಟಿತು ಎಂದಿದ್ದಾರೆ. ಪಾಳೆಯಗಾರರು, ಅಮರನಾಯಕರು, ಮಠಗಳು, ಅಗ್ರಹಾರಗಳು, ದೇವಾಲಯಗಳು ಸ್ವಯಂ ಆಡಳಿತವನ್ನು ಹೊಂದಿದ್ದು ಸಂಸ್ಥಾನಗಳಲ್ಲಿ ಪಟ್ಟಾಭಿಷೇಕ, ಕಂದಾಯ ಸಂಗ್ರಹ, ಸೈನ್ಯ ಸಂಘಟಣೆ ಇತ್ಯಾದಿ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು ಹಾಗೂ ಅಗ್ರಹಾರಗಳಲ್ಲಿ ಬ್ರಾಹ್ಮಣರೇ ಎಲ್ಲಾ ಆಡಳಿತವನ್ನು ನಿರ್ವಹಿಸುತ್ತಿದ್ದು ರಾಜನು ಯಾವುದೇ ರೀತಿಯಾದ ಹಸ್ತಕ್ಷೇಪವನ್ನು ಮಾಡುತ್ತಿರಲಿಲ್ಲ ಆದರೆ ವಿಜಯನಗರ ಅರಸರು ಇವರ ಮೇಲೆ ಅಪ್ರತ್ಯಕ್ಷವಾದ ಹಿಡಿತ ಮತ್ತು ಪ್ರಭುತ್ವವನ್ನು ಹೊಂದಿದ್ದರು. ಎಲ್ಲಾ ನಾಯಕ ಪಾಳೆಯಗಾರರು ವಿಜಯನಗರದ ರಾಜರು ನಮ್ಮ ಸಾರ್ವಭೌಮರೆಂದು ಗೌರವಭಾವದಿಂದ ಕಾಣುತ್ತಿದ್ದರು'.

**ಊಳಿಗಮಾನ್ಯ ರಾಜ್ಯ ಸಿದ್ಧಾಂತ**

ಜಪಾನಿನ ಪ್ರಸಿದ್ಧ ವಿದ್ವಾಂಸರಾದ ನೋಬೋರು ಕರಾಷಿಮಾ ರವರು ಊಳಿಗಮಾನ್ಯ ಸಿದ್ಧಾಂತ(ಫ್ಯೂಡಲ್ ಸ್ಟೇಟ್ ಥಿಯರಿ)ವನ್ನು ಮಂಡಿಸುತ್ತಾರೆ. ಊಳಿಗಮಾನ್ಯ ವ್ಯವಸ್ಥೆಯು ಮಧ್ಯಕಾಲೀನ ಯುರೋಪಿನಿಂದ ಬಂದ ಕಲ್ಪನೆಯಾಗಿದೆ ಎಂದಿದ್ದಾರೆ. ಕರಾಷಿಮಾ ವಿಜಯನಗರ ಆಡಳಿತ ವ್ಯವಸ್ಥೆಯು ವಿಕೇಂದ್ರಿಕೃತ ಆಡಳಿತವಾಗಿದ್ದು ಊಳಿಗ ವ್ಯವಸ್ಥೆಯ ಕಲ್ಪನೆಯನ್ನು ಹೊಂದಿದೆ ಎಂಬುದಾಗಿ ತಿಳಿಸಿದ್ದಾರೆ. ಮುಂದುವರೆದು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹಲವಾರು ರೀತಿಯ ಮಜಲುಗಳನ್ನು ಕಾಣಬಹುದು. ಅವು ಪರಸ್ಪರ ಅವಲಂಭಿತವಾಗಿರುತ್ತದೆ. ರಾಜಕೀಯ ಸಂಬಂದಗಳು ಮಾರ್ಪಟ್ಟಿರುತ್ತವೆ. ಉದಾ: ರಾಜ, ಸಾಮಂತ,

ಮಧ್ಯವರ್ತಿಗಳು, ರೈತರು ಇಲ್ಲಿ ಶ್ರೇಣೀಕೃತ ಸಾಮಜಿಕ ವ್ಯವಸ್ಥೆಯೆಂದು ರಚನೆಯಾಗಿರುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ನಾಡು, ಹಳ್ಳಿ, ದೇವಾಲಯಗಳ ಆಡಳಿತವನ್ನು ಅಧಿಕಾರಿಗಳೇ ಸಾಮಂತ ಮಧ್ಯವರ್ತಿಗಳಂತೆ ನೋಡಿಕೊಳ್ಳುತ್ತಿದ್ದರು. ಕರಾಷಿಮಾರವರ ಪ್ರಕಾರ ವಿಜಯನಗರ ಸಾಮ್ರಾಜ್ಯದ ರಚನೆಯಲ್ಲಿ ಊಳಿಗಮಾನ್ಯ ಲಕ್ಷಣಗಳನ್ನು ಕಾಣಬಹುದಾಗಿದೆ ಅಂದರೆ ಸಾಮಂತರು ಸೈನ್ಯವನ್ನು ಹೊಂದಿರುತ್ತಾನೆ ಮತ್ತು ಸೈನಿಕ ಸೇವೆಯನ್ನೇ ನೀಡಲು ಒಪ್ಪಿರುತ್ತಾನೆ. ಅದಕ್ಕೆ ಪ್ರತಿಯಾಗಿ ರಾಜನು ಅವನ ನಾಯಕತ್ವವನ್ನು ರಕ್ಷಿಸಿ ಅಮರನಾಯಕ ಎಂಬ ಬಿರುದನ್ನು ನೀಡಿ ಭೂಪ್ರದೇಶವನ್ನು ದಾನವಾಗಿ ನೀಡುತ್ತಿದ್ದನು".

ಜಪಾನಿನ ವಿದ್ವಾಂಸರಾದ ನೊಬೋರು ಕರಾಷಿಮಾ ರವರ ವಾದವನ್ನು ಸಿಂಥಿಯಾ ಟಾಲ್ಬಾತ್, ರಾಜೇಂದ್ರ ಪ್ರಸಾದ್ ಬೋಸ್ ಬಾಬು ರವರು ಸಮರ್ಥಿಸುತ್ತಾ ಆಂಧ್ರ ಪ್ರದೇಶದ ಕರ್ನೂಲ್, ಕಡಪ, ಪ್ರಕಾಶಂ, ನೆಲ್ಲೂರು ಜಿಲ್ಲೆಯಲ್ಲಿ ಬರುವ ಹಲವಾರು ಶಾಸನಗಳನ್ನು ಅಧ್ಯಯನ ಮಾಡಿ ವಿಜಯನಗರ ಸಾಮ್ರಾಜ್ಯವು ಕೇಂದ್ರಿಕೃತ ಮತ್ತು ವಿಕೇಂದ್ರಕೃತ ಮಾದರಿಯನ್ನು ಒಳಗೊಂಡ ಸಂಯುಕ್ತ ಮಾದರಿಯ ಸರಕಾರ ವ್ಯವಸ್ಥೆಯನ್ನು ಒಳಗೊಂಡಿತ್ತು ಎಂದಿದ್ದಾರೆ.

ಒಟ್ಟಿನಲ್ಲಿ ವಿಜಯನಗರ ಕಾಲದ ಆಡಳಿತ ವ್ಯವಸ್ಥೆಯು ಕೇಂದ್ರದಲ್ಲಿ ಕೇಂದ್ರಿಕೃತ ಪ್ರಾಂತೀಯ ಮಟ್ಟದಲ್ಲಿ ವಿಕೇಂದ್ರಿಕೃತ ಸರಕಾರವು ಜಾರಿಯಲ್ಲಿತ್ತು. ಕೇಂದ್ರದಲ್ಲಿ ಸಾರ್ವಭೌಮನ ಅಧಿಕಾರ ವಿದ್ದರೆ ಪ್ರಾಂತೀಯ ಮಟ್ಟದಲ್ಲಿ ಊಳಿಗಮಾನ್ಯ ಪ್ರಭುಗಳ ವ್ಯವಸ್ಥೆ ಜಾರಿಯಲ್ಲಿತ್ತು. ವಿಜಯನಗರ ಕಾಲದ ನಾಯಕಮನೆತನಗಳ ನೂರಾರು ಭೂದಾನ ಶಾಸನಗಳು ಸಾರ್ವಭೌಮ ಮತ್ತು ಸಾಮಂತನ ನಡುವಿನ ಸಂಬಂಧಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಹಾಯಕವಾಗಿವೆ. ನ್ಯೂನಿಜ್ ಮತ್ತು ಫಯಾಸ್ ವರದಿಗಳು ವಿಜಯನಗರ ರಾಜರ ಮತ್ತು ಸಾಮಂತ ನಾಯಕರ ಮಧ್ಯ ಇರುವ ಕೊಂಡುಕೊಳ್ಳುವಿಕೆಯ ಬಗ್ಗೆ ಮಾಹಿತಿ ನೀಡುತ್ತೇವೆ. ನ್ಯೂನಿಜ್ ಪ್ರಕಾರ ಭೂಮಿ ಎಲ್ಲಾವು ರಾಜನಿಗೆ ಸೇರಿದ್ದು ಅವನಿಂದ ಭೂಮಿಯನ್ನು ಪಡೆದ ಸೇನಾ ನಾಯಕರು ಅದನ್ನು ಆಳುತ್ತಾರೆ ಈ ರೀತಿಯಲ್ಲಿ ವಿಜಯನಗರ ರಾಜ್ಯವು ಇನ್ನೂರಕ್ಕೂ ಹೆಚ್ಚು ನಾಯಕರಲ್ಲಿ ವಿಭಜನೆಯಾಗಿತ್ತು. ಅವರು ಹೊಂದಿದ ಭೂ ಪ್ರದೇಶ ಅವರಿಗೆ ಬರುವ ಆದಾಯವನ್ನು ಗಮನದಲ್ಲಿ ಇಟ್ಟುಕೊಂಡು ಅವರು ಪೋಷಿಸಬೇಕಾದ ಸೈನ್ಯ ಮತ್ತು ತನಗೆ ಕೊಡಬೇಕಾದ ಆದಾಯವನ್ನು ನಿಗದಿಪಡಿಸುತ್ತಿದ್ದನು, ಅದನ್ನು ನಿದಗಿಪಡಿಸಿದ ತಿಂಗಳಿನಲ್ಲಿ ಪಾವತಿಸಬೇಕಾಗಿತ್ತು. ಸಾರ್ವಭೌಮ, ಸಾಮಂತ, ಉಪಸಾವಂತ, ದರ್ಜೆಯ ನಾಯಕರಿದ್ದು ಅಧಿಕಾರವು ವಿವಿಧ ಸ್ತರಗಳಲ್ಲಿ ಹಂಚಿಕೆಯಾಗಿ ವಿಕೇಂದ್ರಕರಣ ವ್ಯವಸ್ಥೆ ಇತ್ತು ಎಂಬುವುದನ್ನು ನ್ಯೂನಿಜ್ ವರದಿಯಿಂದ ತಿಳಿಯಬಹುದಾಗಿದೆ.

ಫಯಾಸ್‌ನ ವರದಿಯಂತೆ ವಿಜಯನಗರ ರಾಜ್ಯದಲ್ಲಿ ಹಲವಾರು ದೊಡ್ಡನಾಯಕರಿದ್ದು ಹೆಚ್ಚು ಹೆಚ್ಚು ಐಶ್ವರ್ಯವನ್ನು ಹೊಂದಿರುತ್ತಿದ್ದರು. ಇವರು ಸೈನ್ಯದ ಮೇಲೆ ಹತೋಟಿಯನ್ನು ಹೊಂದುವುದರೊಂದಿಗೆ ತಮ್ಮ ಆಡಳಿತ ಪ್ರದೇಶದಲ್ಲಿ ತಾವೇ ರಾಜರಂತೆ ವರ್ತಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಒಂದು ಮಿಲಿಯನ್‌ನಿಂದ ಒಂದುವರೆ ಮಿಲಿಯನ್ ಪರ್ಡಾವೋಗಳ ವರಮಾನವುಳ್ಳ ನಾಯಕರಿದ್ದಾರೆ ಹಾಗೂ ಇವರನ್ನು ವರತುಪಡಿಸಿ ನೂರುಸಾವಿರ, ಇನ್ನೂರು. ಮುನ್ನೂರು, ಐನೂರು ಸಾವಿರ ಪರ್ಡಾವೋಗಳ ವರಮಾನ ಪಡೆಯುತ್ತಿದ್ದರು. ಈ ವರಮಾನದ ಆಧಾರದ ಮೇಲೆ ಅವನು ಸಲಹುಬೇಕಾದ ಸೈನ್ಯವನ್ನು ರಾಜನು ನಿಗದಿಪಡಿಸುತ್ತಿದ್ದನು. ನಾಯಕರು ಸೈನ್ನದಲ್ಲಿ ಪದಾತಿಪಡೆ, ಕುದುರೆ, ಆನೆಗಳು ಇತ್ಯಾದಿ ಸೇನಾ ಪಡೆಗಳೊಂದಿಗೆ ಯಾವಾಗಲೂ ಯುದ್ಧಕ್ಕೆ ಸಿದ್ದರಾಗಿರುತ್ತಿದ್ದರು. ಹೀಗೆ ರಾಜನು ಮಿಲಿಯನ್‌ಗಟ್ಟಲೆ ಸದಾಕಾಲ ಸೈನ್ಯವನ್ನು

ಸಿದ್ಧವಾಗಿಟ್ಟುಕೊಂಡಿರುತ್ತಾನೆ. ಈ ರೀತಿ ಸೈನ್ಯದ ಜೊತೆಗೆ ನಾಯಕರು ರಾಜನಿಗೆ ವಾರ್ಷಿಕವಾಗಿ ನಿಗದಿಪಡಿಸಿದ ಹಣವನ್ನು ಸಂದಾಯ ಮಾಡಬೇಕಾಗಿತ್ತು. ಫಯಾಸ್‌ನ ಮಾಹಿತಿಯನ್ನು ಪರಿಶೀಲಿಸಿದಾಗ ವಿಜಯನಗರ ಸಾಮ್ರಾಜ್ಯದ ಆಡಳಿತವು ಕೇಂದ್ರದಲ್ಲಿ ಸಾರ್ವಭೌಮನಲ್ಲಿ ಕೇಂದ್ರೀಕೃತವಾಗಿದ್ದು ನಂತರ ನಾಯಕರಿಗೆ ಮತ್ತು ಸಾಮಂತರಿಗೆಹಂಚಿಕೆಯಾಗಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ವಿಜಯನಗರ ಕಾಲದ ಆಳ್ವಿಕೆಯನ್ನು ವಿವಿಧ ರೀತಿಯಲ್ಲಿ ತಮ್ಮ ತಮ್ಮ ವಾದ ಮತ್ತು ಸಿದ್ಧಾಂತಗಳ ಮೂಲಕ ಮಂಡಿಸಿರುತ್ತಾರೆ. ಕೆ.ಎ. ನೀಲಕಂಠಶಾಸ್ತ್ರಿರವರ ಕೇಂದ್ರಿಕೃತ ಪ್ರಭುತ್ವ ಸಿದ್ಧಾಂತವನ್ನು ಮಂಡಿಸಿದ್ದಾರೆ. ಬರ್ಟನ್ ಸ್ಟೈನ್‌ರವರು ತಮ್ಮ ಕೃತಿಯಾದ *'ಪೆಸೆಂಟ್ ಸ್ಟೇಟ್ ಆಂಡ್ ಸೊಸೈಟಿ ಇನ್ ಮಿಡಿವಲ್ ಸೌತ್ ಇಂಡಿಯಾ'* ಎಂಬ ಕೃತಿಯಲ್ಲಿ ನೀಲಕಂಠಶಾಸ್ತ್ರಿರವರ ಸಿದ್ಧಾಂತವನ್ನು ತಳ್ಳಿ ಹಾಕಿ ಅದಕ್ಕೆ ಬದಲಾಗಿ ವಿಜಯನಗರ ಆಡಳಿತವು ಸೆಗ್‌ಮೆಂಟರಿ ಸ್ಟೇಟ್ ಎಂಬ ಪರಿಕಲ್ಪನೆಯನ್ನು ನೀಡಿ ಖಂಡಾಂತರ ಅಥವಾ ಘಟಕ ರಾಜ್ಯವಾಗಿತ್ತು ಎಂದು ವಾದಿಸುತ್ತಾರೆ. ನಂತರ ಜಪಾನಿನ ವಿದ್ವಾಂಸರಾದ ನೊಬೋರು ಕರಾಷಿಮಾ ರವರು ಊಳಿಗಮಾನ್ಯ ಸಿದ್ಧಾಂತವನ್ನು ಮಂಡಿಸಿ ಕೇಂದ್ರಿಕೃತ ಮತ್ತು ವಿಕೇಂದ್ರಿಕೃತವಾದ ಸಂಯುಕ್ತ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು ಎಂದು ವಾದಿಸಿದ್ದಾರೆ. ಆದ್ದರಿಂದ ವಿಜಯನಗರ ಕಾಲದ ಆಡಳಿತವು ಕೇಂದ್ರದ ಸಾರ್ವಭೌಮರಿಗೆ ವಿದೇಯರಾಗಿದ್ದುಕೊಂಡು ಪ್ರಾಂತ್ಯದಲ್ಲಿ ವಿಕೇಂದ್ರಕೃತವಾದ ಆಡಳಿತ ವ್ಯವಸ್ಥೆಯನ್ನು ನಾಯಕ ಮನೆತನಗಳು ಹೊಂದಿದ್ದವು ಎಂದು ಹೇಳಬಹುದು.

**ಅಮರನಾಯಕ ಮನೆತನಗಳಲ್ಲಿ ಊಳಿಗಮಾನ್ಯ ಅಂಶಗಳು**

ಭಾರತದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಬಗ್ಗೆ 20ನೇ ಶತಮಾನದಿಂದ ಹಲವಾರು ಚರ್ಚೆಗಳು ನಡೆದಿರುವುದನ್ನು ನಾವು ಗಮನಿಸಬಹುದಾಗಿದೆ. ಮಧ್ಯಕಾಲೀನ ಭಾರತದ ರಾಜಕೀಯ ವ್ಯವಸ್ಥೆಯಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಅನೇಕ ವಿದ್ವಾಂಸರು ಅಧ್ಯಯನವನ್ನು ನಡೆಸಿದ್ದಾರೆ. ಮುಖ್ಯವಾಗಿ ಆರ್.ಎಸ್. ಶರ್ಮ, ಇರ್ಫಾನ್ ಹಬೀಬ್, ಡಿ. ಡಿ. ಕೊಸಾಂಬಿ, ವಿಜಯ್ ಕುಮಾರ್ ಠಾಕೂರ್, ಹರ್ಮನ್ ಕುಲ್ಕೆ, ಬಿ.ಎನ್.ಎಸ್. ಯಾದವ, ನೂರುಲ್ ಹಸನ್. ಡಿ.ಎನ್. ಝಾ. ಬರ್ಟನ್ ಸ್ಟೈನ್, ಸುಬ್ಬರಾಯಲು ಇತ್ಯಾದಿ ಪ್ರಮುಖರು ಅಧ್ಯಯನ ಮಾಡಿದ್ದಾರೆ.

ವಿಜಯನಗರ ಚಕ್ರವರ್ತಿಗಳು ಸ್ಥಾಪಿಸಿದ ನಾಯಕ ವ್ಯವಸ್ಥೆಯು ಊಳಿಗಮಾನ್ಯ ಪದ್ಧತಿಯ ಕೆಲವು ಲಕ್ಷಣಗಳನ್ನು ಹೊಂದಿದೆಯಾದರು ಅದು ಸಂಪೂರ್ಣವಾಗಿ 'ಯುರೋಪಿನ ಊಳಿಗಮಾನ್ಯ ಪದ್ಧತಿಯಂತೆ ಕಾರ್ಯನಿರ್ವಹಿಸುತ್ತಿರಲಿಲ್ಲ. ಮಿಲಿಟರಿ ಮತ್ತು ಭೂ ಹಿಡುವಳಿಗಳ ಸಂಮ್ಮಿಶ್ರಣವೇ ಊಳಿಗಮಾನ್ಯ ಪದ್ಧತಿಯ ಉಸಿರು. ಒಂದು ಮತ್ತೊಂದನ್ನು ಬಿಟ್ಟು ಇರಲು ಸಾಧ್ಯವೇ ಇಲ್ಲ. ಅದು ಒಂದು ಕೇಂದ್ರಕೃತ ವ್ಯವಸ್ಥೆಯಾಗಿದ್ದು ಶ್ರೇಣಿಯ ತುದಿಯಲ್ಲಿ ರಾಜ ಮತ್ತು ನಾಯಕ ಶ್ರೇಣಿಯ ಕೆಳಹಂತದಲ್ಲಿ ರೈತ ಮತ್ತು ಜೀತದ ಆಳುಗಳು ಉತ್ಪಾದಕ ವರ್ಗಗಳಾಗಿದ್ದವು. ಇವರ ಮಧ್ಯವರ್ತಿಗಳು ಹುಟ್ಟಿಕೊಂಡು ಇವರು ಎರಡು ಮೂಖಗಳನ್ನು ಹೊಂದಿದ್ದರು. ಒಂದು ಮೇಲಿನವರಿಗೆ ನಿಷ್ಠೆಯನ್ನು ತೋರಿಸುವುದು ಮತ್ತು ತಮಗಿಂತ ಕೆಳಗಿನವರಿಂದ ನಿಷ್ಠೆಯನ್ನು ಪಡೆಯುವುದಾಗಿತ್ತು". ಸ್ಥಳೀಯ ಮುಖಂಡರು ಸಾಂಪ್ರದಾಯಕವಾಗಿ ಅಭಿಷಕ್ತ ದೊರೆಗಳನ್ನು ತಮ್ಮ ಯಜಮಾನರೆಂದು ಪರಿಗಣಿಸಿ ಕಪ್ಪ ಕಾಣಿಕೆ ಕೊಡುವುದರ ಮೂಲಕ ತಮ್ಮ ನಿಷ್ಠೆಯನ್ನು ತೋರಿಸುತ್ತಿದ್ದರು. ಇದು ಫ್ಯೂಡಲ್ ವ್ಯವಸ್ಥೆಯು ಒಂದು ಪ್ರಧಾನ ಅಂಶವಾಗಿತ್ತು. ಆದರೆ ಇಲ್ಲಿನ ಊಳಿಗಮಾನ್ಯ ವ್ಯವಸ್ಥೆಯು ಯುರೋಪಿನ ಊಳಿಗಮಾನ್ಯ ಪದ್ಧತಿಯ ಪಡಿಯಚ್ಚು ಆಗದೆ

ಇದ್ದಾಗ್ಯೂ ಅಲ್ಲಿನ ಕೆಲವು ಮೂಲ ಕಲ್ಪನೆಗಳನ್ನು ಕಾಣಬಹುದಾಗಿದೆ.

ವಿಜಯನಗರ ಕಾಲದ ಅಮರನಾಯಕ ಪದ್ಧತಿಯಲ್ಲಿ ಊಳಿಗಮಾನ್ಯ ಅಂಶಗಳನ್ನು ಗುರುತಿಸಬಹುದು. ಕನ್ನಡದಲ್ಲಿ ಊಳಿಗಮಾನ್ಯ ಎಂದರೆ ಸೇವೆಗಾಗಿ ಬಿಟ್ಟ ಉಂಬಳಿ ಎಂದು ಕನ್ನಡ ಶಬ್ದಕೋಶಗಳು ವಿವರಿಸಿವೆ. ವಿಜಯನಗರ ಕಾಲದಲ್ಲಿ ಉಂಬಳಿಯನ್ನು ನೀಡುವ ಪದ್ಧತಿಯು ಆರಂಭದ ಕಾಲದಿಂದಲೂ ಜಾರಿಯಲ್ಲಿತ್ತು. ನಾಯಕತನಕ್ಕಾಗಿ ರಾಜನಿಂದ ಭೂಮಿಯನ್ನು ನಾಯಕರು ಉಂಬಳಿಯಾಗಿ ಪಡೆಯುತ್ತಿದ್ದರು. ಇವರ ಭೂದಾನಗಳನ್ನು ಎರಡು ರೀತಿಯಲ್ಲಿ ವಿವರಿಸಬಹುದು. ಒಂದು ರಾಜನಿಂದ ನೇರವಾಗಿ ಕೊಡಲಾಗುತ್ತಿದ್ದ ಭೂದಾನಗಳು ಮತ್ತೊಂದು ರಾಜನ ಅಧಿಕಾರಿ ವರ್ಗ, ನಾಯಕವರ್ಗ, ಸಾಮಂತ ವರ್ಗಗಳಿಂದ ಕೊಡುತ್ತಿದ್ದ ಭೂದಾನಗಳು.

ವಿಜಯನಗರ ಕಾಲದ ಅಮರನಾಯಕ ವ್ಯವಸ್ಥೆಯಲ್ಲಿ ನಾಯಕರು ರಾಜನಿಂದ ಭೂಪ್ರದೇಶ ಪಡೆದುಕೊಂಡು ರಾಜನಿಗೆ ಸೇನಾ ಸೇವೆಯನ್ನು ಮಾಡುವುದರ ಜೊತೆಗೆ ನಿಷ್ಠೆಯನ್ನು ತೋರಿಸುತ್ತಿದ್ದರು. ಈ ಪ್ರದೇಶಕ್ಕೆ ನಾಯಕನೇ ನಿಜವಾದ ಒಡೆಯನಾಗಿರುತ್ತಿದ್ದನು. ವಿಜಯನಗರ ಕಾಲದಲ್ಲಿ ರಾಜನು ನಾಯಕರಿಗೆ ಭೂಪ್ರದೇಶವನ್ನು ಉಂಬಳಿಯಾಗಿ ನೀಡುತ್ತಿದ್ದುದು ಸೈನ್ಯ ಸೇವೆಯೇ ಪ್ರಧಾನ ಅಂಶವಾಗಿತ್ತು. ಆದರೆ ಮಧ್ಯಯುಗದ ಯುರೋಪಿನಲ್ಲಿ ಕ್ಷೇಮ ಮತ್ತು ಭದ್ರತೆಗೋಸ್ಕರವಾಗಿ ಜಮೀನನ್ನು ಹಿಡುವಳಿದಾರರು ಒಬ್ಬ ರಾಜನಿಗೆ ವಹಿಸಿಕೊಟ್ಟು ಆಮೇಲೆ ಅದನ್ನು ಅವನಿಂದ ಉಂಬಳಿಯಾಗಿ ಅಥವಾ ಜಹಗೀರಾಗಿ ಪಡೆಯುತ್ತಿದ್ದನು. ಅಲ್ಲಿ ಇಡೀ ಸಮಾಜವೇ ಫ್ಯೂಡಲಿಸಂ ಪ್ರಭಾವಕ್ಕೆ ಒಳಗಾಗಿತ್ತು. ಆದರೆ ವಿಜಯನಗರ ಸಾಮ್ರಾಜ್ಯದಲ್ಲಿ ಅಮರನಾಯಕ ವ್ಯವಸ್ಥೆಯಲ್ಲಿ ಮಾತ್ರ ಫ್ಯೂಡಲಿಸಂ ಪ್ರಭಾವವನ್ನು ಕಾಣಬಹುದಾಗಿದೆ. ಊಳಿಗಮಾನ್ಯ ಅಂಶಗಳು ನಾಯಕ ವ್ಯವಸ್ಥೆಯಲ್ಲಿ ಅಷ್ಟು ಆಳವಾಗಿ ಬೇರು ಬಿಟ್ಟಿರಲಿಲ್ಲ. ವಿಜಯನಗರದಲ್ಲಿ ಅದು ಒಂದು ಐತಿಹಾಸಿಕ ಅಗತ್ಯವಾಗಿ ಹುಟ್ಟಿಕೊಂಡ ನಾಯಕ ವ್ಯವಸ್ಥೆಯಾಗಿದೆ. ಈ ನಿಟ್ಟಿನಲ್ಲಿ ಹೇಳುವುದಾದರೆ ವಿಜಯನಗರ ಸಾಮ್ರಾಜ್ಯವು ಸಂಪೂರ್ಣ ಯುರೋಪಿನ ಊಳಿಗಮಾನ್ಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದೆ ಸಂಯುಕ್ತ ವಿಕೇಂದ್ರಿಕೃತ ಊಳಿಗಮಾನ್ಯ ಅಂಶಗಳನ್ನು ಹೊಂದಿತ್ತು!!

ಹೀಗೆ ವಿಜಯನಗರ ಕಾಲದ ನಾಯಕರ ಆಳ್ವಿಕೆಯಲ್ಲಿನ ಊಳಿಗಮಾನ್ಯ ಅಂಶಗಳು ಯುರೋಪಿನ ಊಳಿಗಮಾನ್ಯ ವ್ಯವಸ್ಥೆಗಿಂತ ಭೀನ್ನವಾಗಿತ್ತು. ಆದರೆ ಕೆಲವು ಊಳಿಗಮಾನ್ಯ ಅಂಶಗಳನ್ನು ಕಾಣಬಹುದಾಗಿದೆ. 16ನೇ ಶತಮಾನದಲ್ಲಿ ಕೃಷ್ಣದೇವರಾಯ ಮತ್ತು ಸದಾಶಿವರಾಯನ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಕೆಲವು ಊಳಿಗಮಾನ್ಯ ಲಕ್ಷಣಗಳನ್ನು ಹೊಂದಿರುವ ನಾಯಕರ ಮನೆತನಗಳ ಉಗಮವಾಯಿತು. ಈ ನಾಯಕತನ ವ್ಯವಸ್ಥೆಯಿಂದಲೇ ಬೃಹತ್ ಸಾಮ್ರಾಜ್ಯವಾಗಿರುವ ವಿಜಯನಗರ ಸಾಮ್ರಾಜ್ಯದ ನಿಯಂತ್ರಣದಲ್ಲಿ ಎಂದು ತಿಳಿದು ಬರುತ್ತದೆ.

**ಆಕರ ಗ್ರಂಥಗಳು**


- ಖರಾಸಿಮ ನೊಬರು. (2002). *ಎ ಕಾನ್‌ಕಾರ್ಡೆನ್ಸ್ ಆಫ್ ದಿ ವಿಜಯನಗರ ಇನ್ಸ್‌ಕ್ರಿಫ್‌ಸನ್ಸ್ ಇನ್ ಸೌತ್ ಇಂಡಿಯಾ*
- ಲಕ್ಷ್ಮಣ್ ತೆಲಗಾವಿ. (2016). *ವಿಜಯನಗರದ ಅಮರನಾಯಕರು ಮತ್ತು ಪಾಳೇಗಾರರ ಶಾಹಿ.*
- ನಾಯ್ಡು, ಪಿ.ಎಸ್.ಆರ್. *ಆಂಧ್ರ ನಾಯಕಾಸ್ : ಎ ಸ್ಟಡಿ ಆಫ್ ದೇರ್ ಹಿಸ್ಟರಿ ಅಂಡ್ ಕಲ್ಚರ್*
- ನಾಯಕವಾಡಿ, ವೈ.ಹೆಚ್ (1997). *ನಾಯಕ ಸಿಸ್ಟಂ ಅಂಡರ್ ವಿಜಯನಗರ ಎಂಪೈರ್.*

- ನೀಲಕಂಠಶಾಸ್ತ್ರಿ, ಕೆ.ಎ, *ಎ ಸ್ಟಡಿ ಆಫ್ ಸೌತ್ ಇಂಡಿಯಾ ಫ್ರಮ್ ಇಸ್ಟಾರಿಕ್ ಟೈಮ್ ಟು ದಿ ಫಾಲ್ ಆಫ್ ವಿಜಯನಗರ ಎಂಫೈರ್.*
- ಸಾಲೆತ್ತೋರ್, ಬಿ.ಎ. (1934). *ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪೈರ್, ಸಂಪುಟ –I.*
- ಟಾಲ್‌ಬೋತ್ ಸಿಂಥಿಯಾ. (2001). *ದಿ ನಾಯಕಾಸ್ ಆಫ್ ವಿಜಯನಗರ ಆಂಧ್ರ ದಿ ಪ್ರಿಲಿಮನರಿ ಪ್ರೋಸಗ್ರಫಿ ಇನ್ ಕೇನತ್ ಆರ್ ಹಾಲ್ ಸ್ಟ್ರಕ್ಚರ್ ಆಂಡ್ ಸೊಸೈಟಿ ಇನ್ ಅರ್ಲಿ ಸೌತ್ ಇಂಡಿಯಾ.*
- ವೆಂಕಟರಮಣಯ್ಯ, ಎನ್. (1935). *ಸ್ಟಡೀಸ್ ಇನ್ ದಿ ಇಸ್ಟರಿ ಆಫ್ ದಿ ಥರ್ಡ್ ಡೈನಸ್ಟಿ ಆಫ್ ವಿಜಯನಗರ.*